**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 31/2024**

ಸಿಡಬ್ಲ್ಯೂ-01

ಪಿಡಬ್ಲ್ಯೂ-01

| | |
|---|---|
| ಸಾಕ್ಷಿದಾರರ ಹೆಸರು | ನಾಗರೆಡ್ಡಿ ಮರೂಡಿ |
| ತಂದೆ ಹೆಸರು | ಮಡಿವಾಳಪ್ಪ |
| ವಯಸ್ಸು | 73 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕಾಲ್ವೇಕಲ್ಲಾಪುರ ಗ್ರಾಮ |

**ದಿನಾಂಕ : 30-01-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-2 ಮತ್ತು 3 ರವರ ಪರಿಚಯ ಇದ್ದು, ಅವರು ನನ್ನ ಗ್ರಾಮದವರು ಇರುತ್ತಾರೆ. ಚಾಸಾ-4 ನನ್ನ ತಮ್ಮ. ಚಾಸಾ-5 ನನ್ನ ಮಗ. ಚಾಸಾ-6 ರವರಿಂದ 8 ರವರ ಪರಿಚಯ ಇದ್ದು, ಅವರು ನನ್ನ ಗ್ರಾಮದವರು ಇರುತ್ತಾರೆ.

2. ನನಗೆ 3 ಜನ ಸಹೋದರರು ಇರುತ್ತಾರೆ. ನಮ್ಮ ಮತ್ತು ಆರೋಪಿಗಳ ನಡುವೆ ಪಿತ್ರಾರ್ಜಿತ ಆಸ್ತಿಗಳಿಗೆ ಸಂಬಂಧಿಸಿದಂತೆ ವ್ಯಾಜ್ಯಗಳು ಇದ್ದು, ಆರೋಪಿಗಳು ಯಾವಾಗಲೂ ತೊಂದರೆ ನೀಡುತ್ತಿದ್ದರು. ಸದರಿ ಹಿನ್ನಲೆಯಲ್ಲಿ ದಿಃ 08-03-2023 ರಂದು ಸಂಜೆ 6.30 ಗಂಟೆ ಸುಮಾರಿಗೆ ನನ್ನ ತಮ್ಮ ಚಾಸಾ-4 ರವರು ಚಕ್ಕಡಿಯಲ್ಲಿದ್ದ ಜೋಳದ ಸೊಪ್ಪನ್ನು ಮನೆಯ ಪಕ್ಕದಲ್ಲಿ ಇರುವ ಹಿತ್ತಲಿನಲ್ಲಿ ಬಣವೆ ಹಾಕಲು ಹೋಗುತ್ತಿದ್ದನು. ಆಗ 1 ನೇ ಆರೋಪಿಯು ಬಂದು ಜಗಳವನ್ನು ತೆಗೆದಿರುತ್ತಾಳೆ. ಆಗ 1 ನೇ ಆರೋಪಿಯು ಚಾಸಾ-4

ರವರಿಗೆ ಕೆಟ್ಟ ಕೆಟ್ಟ ಶಬ್ದಗಳಿಂದ ಬೈದಿರುತ್ತಾರೆ. ಅದೇ ಸಮಯಕ್ಕೆ 1 ನೇ ಆರೋಪಿಯು ಚಾಸಾ–4 ರವರನ್ನು ನೆಲಕ್ಕೆ ಕೆಡವಿ ಆತನ ಎಡಗಾಲಿನ ಮೊಣಕಾಲಿಗೆ ಕಲ್ಲಿನಿಂದ ಹೊಡೆದಿರುತ್ತಾಳೆ. ಸದರಿ ಹಲ್ಲೇಯಿಂದ ಚಾಸಾ–4 ರವರಿಗೆ ನೋವು ಉಂಟಾಗಿರುತ್ತದೆ. ಆಗ 2 ಮತ್ತು 3 ನೇ ಆರೋಪಿಗಳು ಸಹ 1 ನೇ ಆರೋಪಿಯೊಂದಿಗೆ ಸೇರಿಕೊಂಡು ಚಾಸಾ–4 ರವರಿಗೆ ಕೆಟ್ಟ ಶಬ್ದಗಳಿಂದ ನಿಂದಿಸಿರುತ್ತಾರೆ.

3. ಘಟನೆಯಲ್ಲಿ 1 ನೇ ಆರೋಪಿಯು ಆಸ್ತಿಯು ತನ್ನ ಗಂಡನದು ಎಂದು, 2 ನೇ ಆರೋಪಿಯು ತನ್ನ ತಂದೆಯ ಆಸ್ತಿ ಎಂದು ಮತ್ತು 3 ನೇ ಆರೋಪಿಯು ತನ್ನ ಅಜ್ಜನ ಆಸ್ತಿ ಎಂದು ಕೂಗಾಡಿರುತ್ತಾರೆ. ಘಟನೆಯಲ್ಲಿ ಗಾಯಗೊಂಡ ಚಾಸಾ–4 ರವರನ್ನು ಚಿಕಿತ್ಸೆಗಾಗಿ ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಆಂಬುಲೆನ್ಸ ಮೂಲಕ ನಾನೇ ಕರೆದುಕೊಂಡು ಹೋಗಿರುತ್ತೇನೆ. ಚಾಸಾ–4 ರವರು ಸದರಿ ಆಸ್ಪತ್ರೆಯಲ್ಲಿ 2 ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು. ಚಾಸಾ–4 ರವರನ್ನು ಆಸ್ಪತ್ರೆಯಿಂದ ಬಿಡುಗಡೆ ಗೊಳಿಸಿಕೊಂಡು ಬಂದ ನಂತರ ಕುಟುಂಬದವರೊಂದಿಗೆ ಚರ್ಚಿಸಿ ದಿಃ 11–03–2023 ರಂದು ಘಟನೆಗೆ ಸಂಬಂಧಿಸಿದಂತೆ ನಾನೇ ಪಿರ್ಯಾದನ್ನು ಆಡೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುತ್ತೇನೆ.

4. ಸಾಕ್ಷಿಯು ತಾನು ನೀಡಿದ್ದೇನೆ ಎಂದು ಹೇಳುವ ಪಿರ್ಯಾದನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಪಿರ್ಯಾದನ್ನು ನಿ.ಪಿ–1 ಎಂದು, ಅದರಲ್ಲಿ ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ–1(ಎ) ಎಂದು ಗುರುತಿಸಲಾಯಿತು. ಸದರಿ ಪಿರ್ಯಾದನ್ನು ಚಾಸಾ–2 ರವರು ಬರೆದಿರುತ್ತಾರೆ. ಪಿರ್ಯಾದಿಯಲ್ಲಿ ಇರುವ ಸಂಪೂರ್ಣ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.

5. ದಿಃ 12–02–2023 ರಂದು ನಾನು ತೋರಿಸಿದ ಘಟನಾ ಸ್ಥಳದಲ್ಲಿ, ಚಾಸಾ–2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 11.30 ರಿಂದ ಮಧ್ಯಾಹ್ನ 12.30 ಗಂಟೆಯ ಅವಧಿಯಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ

ಪಂಚನಾಮೆ ಸಮಯಕ್ಕೆ ಪೊಲೀಸರು ಒಂದು ಕಲ್ಲನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಪಂಚನಾಮೆಯ ಸಂಗತಿಗಳನ್ನು ಚಾಸಾ-3 ರವರು ಮಾಹಿತಿ ನೀಡಿ ಬರೆಸಿರುತ್ತಾರೆ. ಅದರಲ್ಲಿ ಇರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಸಾಕ್ಷಿಯು ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ನಿ.ಪಿ-2 ಎಂದು, ಅದರಲ್ಲಿ ಸಾಕ್ಷಿಯು ಗುರುತಿಸಿದ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು.

6. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಕಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ-1 ರೊಂದಿಗೆ ಇರುವ ಬಿಳಿಯ ಮಾದರಿ ಚೀಟಿಯನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ಮು.ಮಾ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ</u>**

ಘಟನೆಯಲ್ಲಿ 2 ಮತ್ತು 3 ನೇ ಆರೋಪಿಗಳು ಸಹ ಚಾಸಾ-4 ರವರಿಗೆ ಕೈಗಳಿಂದ ಹಲ್ಲೇ ಮಾಡಿದ್ದರು ಎಂದರೆ ಸರಿ. 3 ಜನ ಆರೋಪಿಗಳು ಚಾಸಾ-4 ರವರಿಗೆ ರೌಡಿಗಳ ಮೂಲಕ ಜೀವ ತೆಗೆಸುವುದಾಗಿ ಬೆದರಿಕೆ ಹಾಕಿದ್ದರು ಎಂದರೆ ಸರಿ. ಜಗಳವನ್ನು ನೋಡಿದ ನಾನು, ಚಾಸಾ-5 ರಿಂದ 8 ರವರು ಮಧ್ಯ ಪ್ರವೇಶಿಸಿ ಜಗಳವನ್ನು ಬಿಡಿಸಿದ್ದೆವು ಎಂದರೆ ಸರಿ.

ನಿ.ಪಿ–2 ರ ಪಂಚನಾಮೆಯನ್ನು ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ರ ಅವಧಿಯಲ್ಲಿ ಜರುಗಿಸಲಾಗಿತ್ತು ಎಂದರೆ ಸರಿ. ಸದರಿ ಪಂಚನಾಮೆ ಸಮಯಕ್ಕೆ ಘಟನಾ ಸ್ಥಳದಲ್ಲಿ ಪೊಲೀಸರು ಚಾಸಾ–2,3 ಮತ್ತು ನನ್ನ ಸಮಕ್ಷಮ ಒಂದು ಛಾಯಾ ಚಿತ್ರ ತೆಗೆದಿದ್ದರು ಎಂದರೆ ಸರಿ. ಸಾಕ್ಷಿಯು ಛಾಯಾ ಚಿತ್ರವನ್ನು ನೋಡುತ್ತಿದ್ದು, ಅದೇ ಛಾಯಾ ಚಿತ್ರವನ್ನು ಪೊಲೀಸರು ತೆಗೆದಿದ್ದರು ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಪಿ–3 ಎಂದು ಗುರುತಿಸಲಾಯಿತು. ಘಟನೆಗೆ ಸಂಬಂಧಿಸಿದಂತೆ ದಿಃ12–03–2023 ರಂದು ಪೊಲೀಸರಿಗೆ ಹೇಳಿಕೆಯನ್ನು  ನೀಡಿದ್ದೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ  ಕೆ.ಜೆ.ಹೆಚ್ ವಕೀಲರಿಂದ:**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ರೂ.300/– ಗಳ ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ   ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ